ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 53-60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕ ರಾಜ್ಯದ 16ನೇ ವಿಧಾನಸಭಾ ಚುನಾವಣೆ: ಒಂದು ವಿಶ್ಲೇಷಣೆ

**ಮಂಜುನಾಥ ಜೆ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

***Abstract:***

*ಕರ್ನಾಟಕದ ರಾಜಕೀಯ ಇತಿಹಾಸವನ್ನು ಗಮನಿಸಿದಾಗ ಕಳೆದ 37 ವರ್ಷಗಳಲ್ಲಿ ಯಾವುದೇ ಆಡಳಿತರೂಢ ಪಕ್ಷವು ರಾಜ್ಯದಲ್ಲಿ ಮರು ಆಯ್ಕೆಯಾಗಿಲ್ಲ ಎಂಬುದು ಗಮನಾರ್ಹ ಸಂಗತಿ. ಅದೇ ರೀತಿ 16ನೇ ವಿಧಾನಸಭಾ ಚುನಾವಣೆಯಲ್ಲಿಯೂ ಕೂಡ ಈ ಪರಂಪರೆ ಮುಂದುವರೆದಿದೆ. ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧವಾಗಿ ಪ್ರತಿಪಕ್ಷವಾಗಿದ್ದ ಕಾಂಗ್ರೆಸ್ 135 ಸ್ಥಾನಗಳೊಂದಿಗೆ ಸ್ಪಷ್ಟ ಬಹುಮತವನ್ನು ಪಡೆದು ಸರ್ಕಾರವನ್ನು ರಚಿಸಿದೆ. ಪ್ರತಿಯಾಗಿ ಬಿಜೆಪಿ 65 ಹಾಗೂ ಜೆಡಿಎಸ್ 1, ಹಾಗೂ ಇತರರು 04 ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. 2013ರ ನಂತರ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕ ಸ್ಪಷ್ಟ ಬಹುಮತ ಇದಾಗಿದೆ. ರಾಜ್ಯದ ಜನತೆ ಕೇವಲ ಸುಳ್ಳು ಆಶ್ವಾಸನೆಗಳಿಗೆ ತಲೆಬಾಗದೆ ಅಭಿವೃದ್ಧಿಪರ ಮತ ಚಲಾಯಿಸುತ್ತಾರೆ ಎಂಬ ಸಂದೇಶವನ್ನು ಇಡೀ ರಾಷ್ಟ್ರಕ್ಕೆ ತೋರಿಸಿದೆ. ಪ್ರಸ್ತುತ ಲೇಖನದಲ್ಲಿ 1980ರ ದಶಕದಿಂದ 2023ರ ತನಕ ಕರ್ನಾಟಕ ರಾಜಕಾರಣವನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.*

***Keywords:*** *ಸರ್ಕಾರ, ರಾಜಕೀಯ ಪಕ್ಷಗಳು, ಕರ್ನಾಟಕ ವಿಧಾನಸಭಾ ಚುನಾವಣೆ, ರಾಜಕೀಯ ಪ್ರಾತಿನಿಧ್ಯತೆ.*

## ಪೀಠಿಕೆ

ರಾಜ್ಯದಲ್ಲಿ 1952 ರಿಂದ 1983ರ ವರೆಗೆ ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷವೇ ಬಹುಮತ ಪಡೆದು ಅಧಿಕಾರವನ್ನು ಹಿಡಿಯುತ್ತಿತ್ತು. ಪ್ರಬಲ ವಿರೋಧ ಪಕ್ಷಗಳೇ ಇಲ್ಲದ ಕಾಲವದು. ತುರ್ತುಪರಿಸ್ಥಿತಿಯ ಬಳಿಕ ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯಿತು. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲೂ ಜನತಾ ಪಕ್ಷ ಬೇರೂರುವ ಪ್ರಯತ್ನ ಮಾಡಿತಾದರೂ 1983ರ ಚುನಾವಣೆ ಫಲ ಸಿಕ್ಕಿತು. ಆಗ ರಾಜ್ಯದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿತು. ಆದರೆ ಇದು ಪೂರ್ಣಾವಧಿ ಆಡಳಿತ ನಡೆಸಲಿಲ್ಲ. ಬಳಿಕ 2004, 2008, ಮತ್ತು 2018ರಲ್ಲಿ ಅತಂತ್ರ ವಿಧಾನಸಭೆ ರಚನೆಯಾಗಿ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದವು. "ಆಪರೇಷನ್ ಕಮಲ" ದ ಮೂಲಕ ಬಿಜೆಪಿ ತನ್ನ ಸಂಖ್ಯೆಯನ್ನು ವೃದ್ಧಿಸಿಕೊಂಡು ಅಧಿಕಾರ ಭದ್ರಪಡಿಸಿಕೊಂಡಿತು. 1985ರ ನಂತರದ ಚುನಾವಣೆಯಲ್ಲಿ ಯಾವುದೇ ಸರ್ಕಾರ ಮರು ಆಯ್ಕೆಯಾಗಿರುವ ಉದಾಹರಣೆಯೇ ಇಲ್ಲ. ಸತತ 07 ಚುನಾವಣೆಗಳಲ್ಲಿಯೂ ಆಡಳಿತರೂಢ ಸರ್ಕಾರಗಳು ಅಧಿಕಾರ ಕಳೆದುಕೊಂಡಿವೆ. ಪರಿಣಾಮಕಾರಿಯಾಗಿ ಆಡಳಿತ ನಡೆಸಿದವರೂ ತಿರಸ್ಕರಿಸಲ್ಪಟ್ಟಿದ್ದಾರೆ. 1990ರ ದಶಕದಿಂದಲೂ ಕರ್ನಾಟಕದಲ್ಲಿ ಮೂರು ಪ್ರಮುಖ ಪಕ್ಷಗಳು ಕಣದಲ್ಲಿದ್ದು, ಯಾವುದೇ ಪಕ್ಷವು ಸತತ ಬಹುಮತವನ್ನು ಪಡೆಯುವಲ್ಲಿ ವಿಫಲವಾಗುತ್ತಲೇ

***Please cite this article as:*** ಮಂಜುನಾಥ ಜೆ. (2023). ಕರ್ನಾಟಕ ರಾಜ್ಯದ 16ನೇ ವಿಧಾನಸಭಾ ಚುನಾವಣೆ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 53–60.

ಇವೆ. ಆದರೆ 2023ರ 16ನೇ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೇಸ್ ಪಕ್ಷ 135+ ಸ್ಥಾನಗಳನ್ನು ಪಡೆಯುವುದರ ಮೂಲಕ ಸ್ವಷ್ಟ ಜನಾದೇಶವನ್ನು (ಬಹುಮತವನ್ನು) ಪಡೆದುಕೊಂಡಿದೆ. ಈ ಚುನಾವಣೆಯಲ್ಲಿ ಅತಿ ಹೆಚ್ಚು ಮತದಾನವಾಗಿದ್ದು ರಾಮನಗರ ಜಿಲ್ಲೆಯಲ್ಲಿ–85.04% ಅತೀ ಕಡಿಮೆ ಮತದಾನವಾಗಿದ್ದು ಬೆಂಗಳೂರು ನಗರದಲ್ಲಿ–57.71%. ಒಟ್ಟು ಮತದಾನ ಪ್ರಮಾಣ–73.19% ಇಲ್ಲಿಯವರೆಗೆ ನಡೆದ ಚಿನಾವಣೆಯಲ್ಲಿ ಇದೆ ಹೆಚ್ಚು ದಾಖಲಾಗಿರುವ ಮತದಾನದ ಪ್ರಮಾಣ ಎಂಬುದು ಗಮನಾರ್ಹ. ಮತ್ತೋಂದು ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಈ ಚುನಾವಣೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕೇವಲ ಶೇ.4.46% ಇದರಿಂದ ಮಹಿಳೆಯರಿಗೆ ರಾಜಕೀಯದಲ್ಲಿ ಎಷ್ಟರ ಮಟ್ಟಿಗೆ ಸಮಾನತೆಯನ್ನು ಕಲ್ಪಿಸಿದ್ದೇವೆ ಎಂಬುದನ್ನು ಸೂಚಿಸುತ್ತದೆ.

### ಅಧ್ಯಯನದ ಉದ್ದೇಶಗಳು

- ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸವನ್ನು (1983 ರಿಂದ 2023 ರವರೆಗೆ) ತಿಳಿಯುವುದು.
- ವಿಶೇಷವಾಗಿ 2023ರ 16ನೇ ವಿಧಾನಸಭೆ ಚುನಾವಣೆಯನ್ನು ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡುವುದು.

### ಅಧ್ಯಯನದ ವಿಧಾನ

ಈ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

## ಕರ್ನಾಟಕ ರಾಜ್ಯದ ಸಮ್ಮಿಶ್ರ ಸರ್ಕಾರಗಳು ಮತ್ತು ಸ್ವಷ್ಟ ಬಹುಮತದ ಸರ್ಕಾರಗಳ ವಿಶ್ಲೇಷಣೆ (1983 ರಿಂದ 2023)

### 1983 ರಲ್ಲಿ ಭಾಗಶಃ ಸಮ್ಮಿಶ್ರ ಸರ್ಕಾರ

ಕಾಂಗ್ರೆಸ್ ಸರ್ಕಾರದ ದುರಾಡಳಿತ, ರೈತ ವಿರೋಧ ನೀತಿಯ ವಿರುದ್ಧ ಜನತಾ ಪಕ್ಷ, ಕ್ರಾಂತಿರಂಗ, ಬಿಜೆಪಿ, ಸಿಪಿಐ, ಸಿಪಿಎಂ, ಕರ್ನಾಟಕ ರಾಜ್ಯ ರೈತ ಸಂಘ ಸೆಣಸಿದ್ದವು. ಈ ಚುನಾವಣೆಯಲ್ಲಿ ಜನತಾ ಪಕ್ಷ 95 ಸ್ಥಾನಗಳನ್ನು ಗೆಲ್ಲುವ ಮೂಲಕ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತ್ತು. ಕಾಂಗ್ರೆಸ್ 82 ಸ್ಥಾನಗಳನ್ನು ಗೆದ್ದಿತ್ತು. ಆಗ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಎಚ್. ಡಿ ದೇವೇಗೌಡ ಮತ್ತು ಎಸ್.ಬಂಗಾರಪ್ಪ ಅವರ ಮಧ್ಯೆ ತಿಕ್ಕಾಟ ಆರಂಭವಾಯಿತು. ಆಗ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದ ರಾಮಕೃಷ್ಣ ಹೆಗಡೆ ಕರ್ನಾಟಕ ರಾಜಕಾರಣಕ್ಕೆ ಮರಳಿ ಮುಖ್ಯಮಂತ್ರಿ ಹುದ್ದೆ ದಕ್ಕಿಸಿಕೊಂಡರು. 18 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಬಾಹ್ಯ ಬೆಂಬಲ ನೀಡಿತ್ತು. ಇತರ ಸಣ್ಣ ಪಕ್ಷಗಳ ನೆರವಿನೊಂದಿಗೆ ರಾಮಕೃಷ್ಣ ಹೆಗಡೆ ಸರ್ಕಾರ ರಚಿಸಿದರು. 1984ರ ಲೋಕಸಭಾ ಚುನಾವಣೆಯಲ್ಲಿ ಜನತಾಪಕ್ಷ ಕೇವಲ ನಾಲ್ಕು ಸ್ಥಾನಗಳಲ್ಲಿ ಮಾತ್ರ ಗೆದ್ದಿತ್ತು. ನಂತರ ಬಿಜೆಪಿ ಪಕ್ಷದ ತೊಂದರೆಗಳಿಂದ ಬೇಸತ್ತು ಅವರು ಎರಡೇ ವರ್ಷಕ್ಕೆ ಸರ್ಕಾರ ವಿಸರ್ಜಿಸಿ ಚುನಾವಣೆಗೆ ಹೋದರು. ಪಕ್ಷ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಹೇಳಿದ ಹೆಗಡೆಯವರು ವಿಧಾನಸಭೆ ವಿಸರ್ಜಿಸಿದರು. “ಮೌಲ್ಯಧಾರಿತ ರಾಜಕಾರಣ” ಎಂಬ ಘೋಷಣೆ ಮುಂದಿಟ್ಟು ಅವರು, 1985ರಲ್ಲಿ ಚುನಾವಣೆಗೆ ಹೊಸ ಜನಾದೇಶ ಕೇಳಿದರು. 1985ರ ಅಸೆಂಬ್ಲಿ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ಪಕ್ಷ 224 ವಿಧಾನಸಭಾ ಕ್ಷೇತ್ರಗಳಲ್ಲಿ 139 ಸ್ಥಾನಗಳಲ್ಲಿ ಗೆಲುವು ಸಾಧಿಸಿ ಪೂರ್ಣ ಬಹುಮತದೊಂದಿಗೆ ಮತ್ತೊಮ್ಮೆ ಅಧಿಕಾರ ಹಿಡಿಯಿತು. ಅದೇ ಕೊನೆ ಸತತ ಎರಡನೇ ಬಾರಿಗೆ ಸರ್ಕಾರ ರಚಿಸಿದ ಪಕ್ಷವಾಗಿತ್ತು. ಕಾಂಗ್ರೆಸ್ ಆ ಚುನಾವಣೆಯಲ್ಲಿ 65 ಸ್ಥಾನಗಳನ್ನು ಪಡೆದಿತ್ತು. 1989ರಲ್ಲಿ ಮತ್ತೆ ಚುನಾವಣೆ ಎದುರಾಗಿ ವೀರೇಂದ್ರ ಪಾಟೀಲ್ ನಾಯಕತ್ವದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. 178 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿತ್ತು. ಜನತಾ ದಳ 24 ಸ್ಥಾನಗಳಲ್ಲಿ ಗೆದ್ದಿತ್ತು.

ಬದಲಾದ ರಾಜಕೀಯ ಪರಿಸರದಲ್ಲಿ 1994ರಲ್ಲಿ ಎಚ್.ಡಿ.ದೇವೇಗೌಡ ಅವರ ನೇತೃತ್ವದ ಜನತಾ ದಳ 115 ಸ್ಥಾನಗಳನ್ನು ಪಡೆಯಿತು. ಬಿಜೆಪಿ 40

ಸ್ಥಾನಗಳನ್ನು ಪಡೆದರೆ ಕಾಂಗ್ರೆಸ್ ಕೇವಲ 34 ಸ್ಥಾನಗಳಿಗೆ ಕುಸಿಯಿತು. ಜನತಾ ದಳದ ನಾಯಕರಾಗಿದ್ದ ಎಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿಯಾಗಿದ್ದರು. 1999ರಲ್ಲಿ ಮತ್ತೆ ಅಧಿಕಾರಕ್ಕೆ ಮರಳಿದ ಕಾಂಗ್ರೆಸ್ 132 ಸ್ಥಾನಗಳನ್ನು ಪಡೆಯಿತು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾದರು. ಬಿಜೆಪಿ 44 ಸ್ಥಾನಗಳನ್ನು ಪಡೆದು, ಕಳೆದ ಚುನಾವಣೆಗಿಂತ 4 ಹೆಚ್ಚಿನ ಸ್ಥಾನಗಳನ್ನು ತನ್ನದಾಗಿಸಿಕೊಂಡಿತು. ಜನತಾ ದಳ ಒಡೆದು ಹೋಗಿ 'ಜನತಾ ದಳ ಸೆಕ್ಯುಲರ್' (ಜೆಡಿಎಸ್) ರಚನೆಯಾಗಿತ್ತು. ಈ ಚುನಾವಣೆಯಲ್ಲಿ ಜೆಡಿಎಸ್ 10 ಸ್ಥಾನಗಳನ್ನು ಪಡೆದಿತ್ತು.

**2004 ರಲ್ಲಿ ಮೊದಲ ಸಮ್ಮಿಶ್ರ ಸರ್ಕಾರ**

"ಜನಪ್ರಿಯತೆಯ" ಉತ್ತುಂಗದಲ್ಲಿದ್ದ ಎಸ್.ಎಂ. ಕೃಷ್ಣ ಅವರು ಲೋಕಸಭೆ ಚುನಾವಣೆ ಜತೆಗೆ ಹೋದರೆ ಮತ್ತೆ ಅಧಿಕಾರ ಹಿಡಿಯಬಹುದು ಎಂಬ ತವಕದಲ್ಲಿ ಆರು ತಿಂಗಳ ಮೊದಲೇ ವಿಧಾನಸಭೆ ವಿಸರ್ಜಿಸಿದರು. ಅಷ್ಟೊತ್ತಿಗೆ ಕೃಷ್ಣರ ಜತೆ ಮುನಿಸಿಕೊಂಡಿದ್ದ ಎಸ್.ಬಂಗಾರಪ್ಪ ಬಿಜೆಪಿ ಸೇರಿದ್ದರು. 2004ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 79 ಸ್ಥಾನಗಳನ್ನು ಗೆದ್ದು ಏಕೈಕ ಪಕ್ಷವಾಗಿ ಹೊರ ಹೊಮ್ಮಿತು. ಕಾಂಗ್ರೆಸ್ 65 ಮತ್ತು ಜೆಡಿಎಸ್ 58 ಸ್ಥಾನಗಳನ್ನು ಗೆದ್ದುಕೊಂಡವು. "ಕೋಮುವಾದಿ ಪಕ್ಷವನ್ನು ಅಧಿಕಾರದಿಂದ ದೂರ ಇಡಬೇಕು" ಎಂದು ಹೇಳಿಕೊಂಡ ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದವು. ಕಾಂಗ್ರೆಸ್ಸಿನ ಧರ್ಮಸಿಂಗ್ ಮುಖ್ಯಮಂತ್ರಿಯಾದರೆ, ಜೆಡಿಎಸ್‌ನ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಸರ್ಕಾರ ಹೆಚ್ಚು ಕಾಲ ಬಾಳಲಿಲ್ಲ. ಒಂದು ಕಡೆ ಜೆಡಿಎಸ್‌ನಲ್ಲಿ ಎಚ್.ಡಿ.ದೇವೇಗೌಡ ಮತ್ತು ಸಿದ್ದರಾಮಯ್ಯ ಮಧ್ಯೆ ಬಾಂದವ್ಯ ಹಳಸಿತ್ತು. ದೇವೇಗೌಡರ ಪುತ್ರ ಎಚ್.ಡಿ.ಕುಮಾರಸ್ವಾಮಿ 42 ಶಾಸಕರೊಂದಿಗೆ ಸೇರಿ ಸಮ್ಮಿಶ್ರ ಸರ್ಕಾರದಿಂದ ಹೊರ ನಡೆದ ಕಾರಣ ಸಮ್ಮಿಶ್ರ ಸರ್ಕಾರ ಪತನಗೊಂಡಿತು.

**2006 ರಲ್ಲಿ ಎರಡನೇ ಸಮ್ಮಿಶ್ರ ಸರ್ಕಾರ**

2006ರ ಜನವರಿ 28 ರಂದು ಎಚ್.ಡಿ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಮತ್ತು ಬಿಜೆಪಿ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿದವು. ತಲಾ 20 ತಿಂಗಳುಗಳಂತೆ ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಾಹಿಸುವ ಒಪ್ಪಂದಕ್ಕೆ ಬರಲಾಗಿತ್ತು. ಆದರೆ, 20 ತಿಂಗಳು ಮುಗಿಯುತ್ತಿದ್ದಂತೆ ಕುಮಾರಸ್ವಾಮಿ ಮುಖ್ಯಮಂತ್ರಿಸ್ಥಾನ ಬಿಟ್ಟುಕೊಡಲು ಒಪ್ಪಲಿಲ್ಲ. ಎರಡೂ ಪಕ್ಷಗಳ ಮಧ್ಯೆ ಮತ್ತೆ ಮಾತುಕತೆ ನಡೆದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ ಜೆಡಿಎಸ್ ಬೆಂಬಲ ಹಿಂದಕ್ಕೆ ಪಡೆದ ಕಾರಣ ಸರ್ಕಾರ ಪತನವಾಯಿತು. ರಾಷ್ಟ್ರಪತಿ ಆಡಳಿತ ಹೇರಲಾಯಿತು.

2006ರಲ್ಲಿ ಎಚ್.ಡಿ ಕುಮಾರಸ್ವಾಮಿಯವರು ಬಿಜೆಪಿಯ ಯಡಿಯೂರಪ್ಪನವರೊಂದಿಗೆ 20–20 ತಿಂಗಳ ಒಳ ಒಪ್ಪಂದ ಮಾಡಿಕೊಂಡು ಕಾಂಗ್ರೆಸ್‌ನಿಂದ ಹೊರಬಂದು ಸರ್ಕಾರ ರಚಿಸಿದರು. ಆದರೆ 2008ರಲ್ಲಿ ಅಧಿಕಾರ ಬಿಟ್ಟುಕೊಡದ ಕಾರಣ ಸರ್ಕಾರ ಪತನವಾಯಿತು.

**2008 ರಲ್ಲಿ "ಆಪರೇಷನ್ ಕಮಲ'ದ ಸರ್ಕಾರ**

ಎಚ್.ಡಿ.ಕುಮಾರಸ್ವಾಮಿ "ವಿಶ್ವಾಸ ದ್ರೋಹ" ಮಾಡಿದ್ದಾರೆ ಎಂದು ದೂಷಿಸಿದ್ದ ಯಡಿಯೂರಪ್ಪ ಚುನಾವಣೆ ಎದುರಿಸಿದರು. 110 ಸ್ಥಾನಗಳನ್ನು ಗೆದ್ದುಕೊಂಡು ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದರೆ ಅಧಿಕಾರ ರಚಿಸುವ ಬಲ ಇರಲಿಲ್ಲ. ಕಾಂಗ್ರೆಸ್–80, ಜೆಡಿಎಸ್–28 ಮತ್ತು ಪಕ್ಷೇತರರು–6 ಸ್ಥಾನಗಳನ್ನು ಗೆದ್ದರು. ಪಕ್ಷೇತರರ ನೆರವು ಪಡೆದುಕೊಂಡ ಬಿ.ಎಸ್.ಯಡಿಯೂರಪ್ಪ ಸರ್ಕಾರ ರಚಿಸಿದರು. ಪಕ್ಷೇತರರು ಊರುಗೋಲಿನಲ್ಲಿ ಅಸ್ಥಿರ ಸರ್ಕಾರ ನಡೆಸಿದ್ದ ಯಡಿಯೂರಪ್ಪ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಶಾಸಕರಿಗೆ ಗಾಳಹಾಕಿ "ಆಪರೇಷನ್

ಕಮಲ" ನಡೆಸಿದರು. ಈ ಅವಧಿಯಲ್ಲಿ ಭ್ರಷ್ಟಾಚಾರ ಆರೋಪಕ್ಕೆ ಗುರಿಯಾದ ಯಡಿಯೂರಪ್ಪ ರಾಜಿನಾಮೆ ಕೊಟ್ಟರು. ತಮ್ಮದೇ ಮೂಗಿನ ನೇರ ನಡೆಯುವ ಮುಖ್ಯಮಂತ್ರಿ ಬೇಕು ಎಂಬ ಕಾರಣಕ್ಕೆ ಡಿ.ವಿ.ಸದಾನಂದಗೌಡ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿದರು. ಆದಾದ ಕೆಲವೇ ದಿನಗಳಲ್ಲಿ ಯಡಿಯೂರಪ್ಪ ಜೈಲಿಗೆ ಹೋದರು. ಸದಾನಂದಗೌಡರು ತಮ್ಮ ಮಾತಿಗೆ ಕಿವಿಗೊಡುತ್ತಿಲ್ಲ ಎಂದು ಸಿಟ್ಟಾದ ಯಡಿಯೂರಪ್ಪ, ಅವರನ್ನು ಇಳಿಸಿ ಜಗದೀಶ ಶೆಟ್ಟರ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿದರು.

2013ರ ಚುನಾವಣೆ ವೇಳೆಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ 122 ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರ ಹಿಡಿಯಿತು. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದರು. ಜೆಡಿಎಸ್ 40 ಕ್ಷೇತ್ರಗಳಲ್ಲಿ ಗೆಲುವು ಪಡೆದಿತ್ತು. ಬಿಜೆಪಿ 40 ಸ್ಥಾನಗಳಿಗೆ ಕುಸಿಯಿತು. ಆ ಚುನಾವಣೆಯಲ್ಲಿ ಬಿಜೆಪಿಯಿಂದ ಬಂಡಾಯವೆದ್ದಿದ್ದ ಬಿ.ಎಸ್.ಯಡಿಯೂರಪ್ಪನವರು ದಿನಾಂಕ 09–12–2012 ರಂದು ಕೆಜೆಪಿಯನ್ನು ಕಟ್ಟಿದ್ದು, ಬಿಜೆಪಿಗೆ ಭಾರೀ ಹೊಡೆತ ನೀಡಿತು. 2013ರ ಚುನಾವಣಾ ಫಲಿತಾಂಶದಿಂದ ಕಂಗೆಟ್ಟಿದ್ದ ಬಿಜೆಪಿ ನಾಯಕರು ಮತ್ತೆ ಯಡಿಯೂರಪ್ಪನವರನ್ನು ಬಿಜೆಪಿಗೆ ಕರೆತಂದರು.

**2018ರ ಸಮ್ಮಿಶ್ರ ಸರ್ಕಾರ**

2018 ರ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿ 104 ಸ್ಥಾನಗಳನ್ನು ಗೆಲ್ಲುವ ಮೂಲಕ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತು. ಕಾಂಗ್ರೆಸ್ 78 ಸ್ಥಾನಗಳನ್ನು ಗೆದ್ದುಕೊಂಡರೆ, ಜೆಡಿಎಸ್ 37 ಸ್ಥಾನಗಳನ್ನು ಗೆದ್ದುಕೊಂಡಿತು. 2018ರ ಚುನಾವಣೆಯಲ್ಲಿ ಬಿಜೆಪಿ 104 ಸ್ಥಾನಗಳನ್ನು ಗೆದ್ದಿತು. ಹೆಚ್ಚು ಸ್ಥಾನ ಗಳಿಸಿದ್ದರಿಂದ ಬಿಜೆಪಿ ನೇತೃತ್ವದ ಸರ್ಕಾರ ರಚನೆಗೆ ಆಗಿನ ರಾಜ್ಯಪಾಲರಾದ ವಾಜುಭಾಯಿ ರೂಡಭಾಯಿ ವಾಲಾರವರು ಅವಕಾಶ ನೀಡಿದರು. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆದರೆ ಬಹುಮತ ಸಾಬೀತು ಮಾಡಲಾಗದೆ ರಾಜೀನಾಮೆ ನೀಡಿದರು. ಈ ಮಧ್ಯೆ 79 ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್, 37 ಕ್ಷೇತ್ರಗಳಲ್ಲಿ ಗೆದ್ದಿದ್ದ ಜೆಡಿಎಸ್ ಜೊತೆಯಲ್ಲಿ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿತು. ಎಚ್.ಡಿ.ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ ಯಾದರು. ಈ ಸರ್ಕಾರದಲ್ಲಿ ಜಿ.ಪರಮೇಶ್ವರ ಅವರು ಉಪಮುಖ್ಯಮಂತ್ರಿಯಾದರು ಆದರೆ 2019 ಲೋಕಸಭೆ ಚುನಾವಣೆಯ ಬಳಿಕ ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಬಿರುಕು ಮೂಡಿತು. ಮುಖ್ಯಮಂತ್ರಿಯಾಗಲೇಬೇಕು ಎಂಬ ಹಟಕ್ಕೆ ಬಿದ್ದಿದ್ದ ಯಡಿಯೂರಪ್ಪ ಮತ್ತೆ "ಆಪರೇಷನ್ ಕಮಲ" ನಡೆಸಿದರು. ಲೋಕಸಭೆ ಚನಾವಣೆ ಮುಗಿಯುತ್ತಿದ್ದಂತೆ, ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ಸೇರಿ 17 ಶಾಸಕರು ಮೈತ್ರಿ ಸರ್ಕಾರದಿಂದ ಹೊರಬಂದು ಬಿಜೆಪಿ ಸೇರಿದರು. ಇದರ ಫಲವಾಗಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಒಂದೂವರೆ ವರ್ಷ ಅಧಿಕಾರದಲ್ಲಿದ್ದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಇವರ ನಂತರ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದರು.

**2023 ರ ಕಾಂಗ್ರೆಸ್‌ನ ಸ್ಪಷ್ಟ ಬಹುಮತದ ಸರ್ಕಾರ**

2023 ರ ಕರ್ನಾಟಕ ರಾಜ್ಯದ 16ನೇ ವಿಧಾನಸಭೆ ಚುನಾವಣೆಯಲ್ಲಿ 135 ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿದೆ. ಈ ಮೂಲಕ ಕಾಂಗ್ರೆಸ್‌ನ ಹೈಕಮಾಂಡ್ ನಿರ್ಧಾರದಂತೆ ಕರ್ನಾಟಕ ರಾಜ್ಯದ 31ನೇ ಮುಖ್ಯಮಂತ್ರಿಯಾಗಿ ಎರಡನೇ ಭಾರಿಗೆ ಶ್ರೀಯುತ ಸಿದ್ದರಾಮಯ್ಯನವರು ಹಾಗೂ ಶ್ರೀಯುತ ಡಿ ಕೆ ಶಿವಕುಮಾರ್‌ರವರು ಮೊದಲ ಭಾರಿಗೆ ಉಪ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿದಾರೆ. ಅಧಿಕಾರ ವಹಿಸಿಕೊಂಡರು. ಹಾಗೂ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕಮಾರ್ ಅಧಿಕಾರ ವಹಿಸಿಕೊಂಡರು. ಈ ಚುನಾವಣೆಯಲ್ಲಿ ಬಿಜೆಪಿ 66 ಸ್ಥಾನಗಳಿಗೆ ಗಳಿಸಿದೆ, ಜೆಡಿಎಸ್ 19 ಸ್ಥಾನಕ್ಕೆ ಕುಸಿದಿದೆ ಹಾಗು ಇತರೆ 04 ಸ್ಥಾನಗಳು ಪಕ್ಷೇತರರ ಪಾಲಾಗಿವೆ. ಕಳೆದ 37

ವರ್ಷಗಳ ರಾಜಕೀಯ ಇತಿಹಾಸದಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಅಧಿಕಾರ ಹಿಡಿಯಲು ರಾಜ್ಯದಲ್ಲಿ ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿದ್ದ ಬಿಜೆಪಿ ಸರ್ಕಾರ ತೀವ್ರವಾಗಿ ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿತ್ತು. ರಾಜ್ಯ ನಾಯಕತ್ವವನ್ನು ಕಡೆಗಣಿಸಿ, ಕೇಂದ್ರಕ್ಕೆ ಜೋತು ಬಿದ್ದ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡಿದೆ. ಶೇ.40% ಕಮಿಷನ್ ಆರೋಪ ಏಟು ನೀಡಿದೆ. ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾದ ಬಳಿಕ ರಾಜ್ಯವು ಒಂದಲ್ಲ ಒಂದು ಕೋಮು ಕೇಂದ್ರಿತ ವಿವಾದಗಳಲ್ಲಿ ಸಿಲುಕಿತ್ತು. ಅಭಿವೃದ್ಧಿಗಿಂತ ಹಿಂದುತ್ವವನ್ನು ಮುಂದು ಮಾಡಿ ಕೋಮು ನೆಲೆಯಲ್ಲಿ ರಾಜಕೀಯ ಧ್ರುವೀಕರಣಕ್ಕೆ ಬಿಜೆಪಿ ಯತ್ನಿಸಿತ್ತು. ಈ ಹಿಂದೆ ಯಾವತ್ತೂ ಆಗದಷ್ಟು ಕೋಮು ಪ್ರಚೋದಿತ ಘಟನೆಗಳು ಇಲ್ಲಿ ಘಟಿಸಿದ್ದವು. ಇದೆಲ್ಲವನ್ನೂ ಅದೃಶ್ಯ ಮತದಾರ ತಿರಸ್ಕರಿಸಿ ಕಾಂಗ್ರೆಸ್ ಜೊತೆ 'ಕೈ' ಜೋಡಿಸಿರುವುದು ಸ್ಪಷ್ಟವಾಗಿದೆ. ಸರ್ಕಾರಗಳಿಗೆ ಬುದ್ಧಿ ಕಲಿಸುವ ಪ್ರಬುದ್ಧತೆಯನ್ನು ಕರ್ನಾಟಕ ಮತದಾರರು ಮುಂದುವರಿಸಿದ್ದಾರೆ.

## 2023ರ 16ನೇ ವಿಧಾನಸಭೆಯ ಚುನಾವಣೆಯ ಪ್ರಮುಖ ಅಂಶಗಳು

**ಸಮುದಾಯವಾರು ಜನಸಂಖ್ಯೆ ಮತ್ತು ಹಾಲಿ ಶಾಸಕರ ಸಂಖ್ಯೆ:**

ಅಂದಾಜಿನ ಪ್ರಕಾರ ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ ಶೇ. 14 ರಿಂದ 17, ಒಕ್ಕಲಿಗರ ಸಂಖ್ಯೆ ಶೇ. 11–12, ಬ್ರಾಹ್ಮಣರು ಶೇ.3.5, ಒಬಿಸಿ ಶೇ. 23%, ಪರಿಶಿಷ್ಟ ಜಾತಿ (ದಲಿತರು) ಶೇ. 15 ರಿಂದ 17, ಪರಿಶಿಷ್ಟ ಪಂಗಡ ಶೇ. 5–7, ಮುಸ್ಲಿಮರ ಜನಸಂಖ್ಯೆ ಶೇ. 11–16ರಷ್ಟಿದೆ ಎಂದು ಅಂಕಿಅಂಶಗಳು ಹೇಳುತ್ತವೆ. ಬಲಾಢ್ಯ ಜಾತಿಗಳ ಪ್ರಾಬಲ್ಯವನ್ನು ಡಿ.ದೇವರಾಜ ಅರಸು (ಮುಖ್ಯಮಂತ್ರಿ, 1972–1980) ಅವರು ಮುರಿದಿದ್ದರು. ಲಿಂಗಾಯತರು ಮತ್ತು ಒಕ್ಕಲಿಗರನ್ನು ಬಿಟ್ಟು ಹೆಚ್ಚು ಸಂಖ್ಯೆಯಲ್ಲಿರುವ ಹಿಂದುಳಿದ ಜಾತಿಗಳನ್ನು ಸಂಘಟಿಸಿ ಚುನಾವಣಾ ನಿಯಮಗಳನ್ನು ಅರಸು ಬದಲಿಸಿದ್ದರು. ಆದರೆ ಸಾಂಪ್ರದಾಯಿಕವಾಗಿ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದವರು ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಪಡೆಯುತ್ತಾರೆ. ಈ ಸಮುದಾಯಗಳ ಸಂಖ್ಯಾ ಬಲಕ್ಕಿಂತ ಹೆಚ್ಚಿನ ರಾಜಕೀಯ ಸ್ಥಾನಮಾನ ಈ ಜಾತಿಗಳಿಗೆ ಇದೆ.

**ಕೋಷ್ಟಕ 01: ಕರ್ನಾಟಕದ 16ನೇ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದವರ ಜಾತಿವಾರು ವಿವರ**

| ಕ್ರ.ಸಂ | ಜಾತಿ ಹೆಸರು | ಶಾಸಕರ ಸಂಖ್ಯೆ |
|---|---|---|
| 01 | ಲಿಂಗಾಯತ | 39 |
| 02 | ಒಕ್ಕಲಿಗ | 21 |
| 03 | ಪರಿಶಿಷ್ಟ ಪಂಗಡ | 15 |
| 04 | ಪರಿಶಿಷ್ಟ ಜಾತಿ (ಬಲಗೈ) | 11 |
| 05 | ಪರಿಶಿಷ್ಟ ಜಾತಿ (ಎಡಗೈ) | 06 |
| 06 | ಪರಿಶಿಷ್ಟ ಜಾತಿ (ಭೋವಿ) | 03 |
| 07 | ಪರಿಶಿಷ್ಟ ಜಾತಿ (ಲಂಬಾಣಿ) | 01 |
| 08 | ಪರಿಶಿಷ್ಟ ಜಾತಿ (ಕೊರಚ) | 01 |
| 09 | ಮುಸ್ಲಿಂ | 09 |
| 10 | ಕುರುಬರು | 08 |
| 11 | ರೆಡ್ಡಿ | 04 |
| 12 | ಬ್ರಾಹ್ಮಣ | 03 |
| 13 | ಈಡಿಗ | 03 |
| 14 | ಮರಾಠ | 02 |
| 15 | ಬಿಲ್ಲವ | 01 |
| 16 | ಬಂಟರು | 01 |
| 17 | ಕೊಡವ | 01 |
| 18 | ಕ್ರೈಸ್ತರು | 01 |
| 19 | ಜೈನ್ | 01 |
| 20 | ಬಲಿಜ | 01 |
| 21 | ಬೆಸ್ತ | 01 |
| 22 | ರಜಪೂತ | 01 |
| 23 | ಉಪ್ಪಾರ | 01 |
| | **ಒಟ್ಟು** | **135** |

**ಮೂಲ:** ಕನ್ನಡ ಪ್ರಭ ದಿನಪತ್ರಿಕೆ

**ಕೋಷ್ಟಕ 02: 2023ರ 16ನೇ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವಾರು ಮತಪ್ರಮಾಣ ಸಾಧನೆ**

| ಕ್ರ.ಸಂ | ಪಕ್ಷ | ಮತ ಪ್ರಮಾಣ |
|---|---|---|
| 01 | ಕಾಂಗ್ರೆಸ್ | 42.88% (+4.80%) |
| 02 | ಬಿಜೆಪಿ | 36% (–0.26%) |
| 03 | ಜೆಡಿಎಸ್ | 13.29% (–5.02%) |
| 04 | ಇತರ ಪಕ್ಷಗಳು | 7.83% (+5.02%) |

ಮೂಲ: ಭಾರತದ ಚುನಾವಣಾ ಆಯೋಗ, ಭಾರತ ಸರ್ಕಾರ

**ಕೋಷ್ಟಕ 03: ಕರ್ನಾಟಕ ವಿಧಾನಸಭೆ ಚುನಾವಣೆಯಲಿ ಮಹಿಳಾ ಪ್ರಾತಿನಿಧ್ಯದ ವಿವರ (1952–2023)**

| ಕ್ರ. ಸಂ | ವರ್ಷ | ಮಹಿಳಾ ಪ್ರಾತಿನಿಧ್ಯ | | ಕ್ರ. ಸಂ | ವರ್ಷ | ಮಹಿಳಾ ಪ್ರಾತಿನಿಧ್ಯ |
|---|---|---|---|---|---|---|
| 01 | 1952 | ಶೂನ್ಯ | | 09 | 1989 | 10 |
| 02 | 1957 | 13 | | 10 | 1994 | 07 |
| 03 | 1962 | 18 | | 11 | 1999 | 06 |
| 04 | 1967 | 05 | | 12 | 2004 | 06 |
| 05 | 1972 | ಶೂನ್ಯ | | 13 | 2008 | 03 |
| 06 | 1978 | 08 | | 14 | 2013 | 06 |
| 07 | 1983 | 01 | | 15 | 2018 | 07 |
| 08 | 1985 | 01 | | 16 | 2023 | 09 |

ಮೂಲ: ಭಾರತದ ಚುನಾವಣಾ ಆಯೋಗ, ಭಾರತ ಸರ್ಕಾರ

ಹನ್ನೆರಡನೇ ಶತಮಾನದಲ್ಲಿ ಶಿವಶರಣ ಬಸವಣ್ಣನವರು ಅನುಭವಮಂಟಪದ ಮೂಲಕ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿದ್ದರು. ಆದರೆ ಪ್ರಜಾಪ್ರಭುತ್ವ ಚುನಾವಣೆಯಲ್ಲಿ ಮಹಿಳೆಗೆ ಸಿಕ್ಕ ರಾಜಕೀಯ ಪ್ರಾತಿನಿಧ್ಯ ಕೇವಲ ಶೇ.4.46% ರಷ್ಟು. 2023ರ ವಿಧಾನಸಭೆ ಚುನಾವಣೆಯಲ್ಲಿ 2,631 ಅಭ್ಯರ್ಥಿಗಳ ಪೈಕಿ 185 ಮಹಿಳೆಯರಿದ್ದರು (ಶೇ.7.07), ಬಿಜೆಪಿಯಿಂದ–12 (ಶೇ.5.35), ಕಾಂಗ್ರೆಸ್‌ನಿಂದ–11 (ಶೇ.4.91), ಜೆಡಿಎಸ್‌ನಿಂದ–09 (ಶೇ.04.01) ಮಹಿಳೆಯರು ಸ್ಪರ್ಧಿಸಿದ್ದರು. ಅವರಲ್ಲಿ ಬಿಜೆಪಿಯಿಂದ ಮೂವರು (ಶೇ.1.33), ಕಾಂಗ್ರೆಸ್‌ನಿಂದ ನಾಲ್ವರು (ಶೇ.1.78), ಜೆಡಿಎಸ್‌ನಿಂದ ಇಬ್ಬರು (ಶೇ.0.08) ಹಾಗೂ ಪಕ್ಷೇತರ ಒಬ್ಬರು (ಶೇ.0.67) ಮಹಿಳಾ ಅಭ್ಯರ್ಥಿಗಳು ಗೆಲ್ಲುವ ಮೂಲಕ ರಾಜಕೀಯ ಅವಕಾಶ ದೊರಕಿದೆ.

ರಾಜ್ಯದಲ್ಲಿ 2.64 ಕೋಟಿ ಮಹಿಳಾ ಮತದಾರರಿದ್ದು ರಾಜಕೀಯ ಸಮಾನ ಅವಕಾಶದ ನೆಲೆಯಲ್ಲಿ ಮಹಿಳೆಯರಿಗೆ 112 ಸ್ಥಾನ ಅಥವಾ ಪ್ರಸ್ತಾಪಿತ ಶೇ.33.33% ಮೀಸಲಿನ ಆಧಾರದಲ್ಲಿ 74 ಸೀಟುಗಳಾದರೂ ಸಿಗಬೇಕಿತ್ತು. 2018 ರ ಚುನಾವಣೆಯಲ್ಲಿ 2613 ಅಭ್ಯರ್ಥಿ ಪೈಕಿ 219 ಮಹಿಳೆಯರು ಸ್ಪರ್ಧಿಸಿದ್ದು, ಕಾಂಗ್ರೇಸ್ 15, ಬಿಜೆಪಿ 6, ಜೆಡಿಎಸ್ ನಾಲ್ವರಿಗೆ ಟಿಕೆಟ್ ನೀಡಿತ್ತು. ಆದರೆ, ಒಟ್ಟಾರೆ ಗೆದ್ದ ಮಹಿಳೆಯರ ಸಂಖ್ಯೆ 7 (ಶೇ.3.12). ಇನ್ನು 75 ಸದಸ್ಯರ ಬಲವುಳ್ಳ ವಿಧಾನ ಪರಿಷತ್‌ನಲ್ಲಿ ಈಗ ಕೇವಲ ಮೂವರು (ಶೇ.4) ಮಹಿಳೆಯರಿಗಷ್ಟೆ ರಾಜಕೀಯ ಪ್ರಾತಿನಿಧ್ಯವಿದೆ.

**ಕೋಷ್ಟಕ 04: ಕರ್ನಾಟಕ 16 ನೇ ವಿಧಾನಸಭೆ ಚುನಾವಣೆಗೆ ಆಯ್ಕೆಯಾದ ಜನಪ್ರತಿನಿಧಿಗಳ ಜಾತಿವಾರು ವಿವರ**

| ಕ್ರ.ಸಂ | ಜಾತಿ | ಸಂಖ್ಯೆ |
|---|---|---|
| 1 | ಲಿಂಗಾಯತ | 53 |
| 2 | ಒಕ್ಕಲಿಗ | 46 |
| 3 | ಬ್ರಾಹ್ಮಣ | 10 |
| 4 | ಕುರುಬ | 13 |
| 5 | ಮುಸ್ಲಿಮ್ | 9 |
| 6 | ಕ್ರೈಸ್ತ | 1 |
| 7 | ಬಂಟರು | 5 |
| 8 | ಜೈನ್ | 1 |
| 9 | ಬೆಸ್ತ | 1 |
| 10 | ಕೋಲಿ | 1 |
| 11 | ಮೊಗವೀರ | 2 |
| 12 | ಬಿಲ್ಲವ | 7 |
| 13 | ಈಡಿಗ | 5 |
| 14 | ಮರಾಠ | 3 |
| 15 | ಕೊಡವ | 1 |

| | | |
|---|---|---|
| 16 | ರಜಪೂತ್ | 1 |
| 17 | ರೆಡ್ಡಿ | 2 |
| 18 | ಎಸ್ಟಿ (ವಾಲ್ಮೀಕಿ) | 18 |
| 19 | ಎಸ್‌ಸಿ(ಬಲಗೈ) | 14 |
| 20 | ಎಸ್‌ಸಿ(ಎಡಗೈ) | 8 |
| 21 | ಎಸ್‌ಸಿ (ಭೋವಿ) | 7 |
| 22 | ಎಸ್‌ಸಿ (ಲಂಬಾಣಿ) | 6 |
| 23 | ಎಸ್‌ಸಿ (ಮೊಗವೀರ್) | 1 |
| 24 | ಉಪ್ಪಾರ | 1 |
| 25 | ಇತರೆ ಸಮುದಾಯ | 8 |
| | ಒಟ್ಟು | 224 |

**ಮೂಲ:** ವಾರ್ತಾಭಾರತಿ ದಿನಪತ್ರಿಕೆ

**ಕೋಷ್ಟಕ 05: 2018 ಮತ್ತು 2023 ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವಾರು ಗಳಿಸಿದ ಸ್ಥಾನಗಳು**

| ಕ್ರಸಂ | ಪಕ್ಷ | 2018 | 2023 |
|---|---|---|---|
| 01 | ಕಾಂಗ್ರೆಸ್ | 80 | 135 |
| 02 | ಬಿಜೆಪಿ | 104 | 66 |
| 03 | ಜೆಡಿಎಸ್ | 37 | 19 |
| 04 | ಪಕ್ಷೇತರರು | 01 | 02 |
| 05 | ಬಿಎಸ್‌ಪಿ | 01 | – |
| 06 | ಕೆಪಿಜೆಪಿ | 01 | – |
| 07 | ಕಲ್ಯಾಣ ರಾಜ್ಯ ಪ್ರಗತಿ ಪಕ್ಷ | – | 01 |
| 08 | ಸರ್ವೋದಯ ಕರ್ನಾಟಕ ಪಕ್ಷ | – | 01 |
| | ಒಟ್ಟು | 224 | 224 |

**ಮೂಲ:** ಭಾರತದ ಚುನಾವಣಾ ಆಯೋಗ, ಭಾರತ ಸರ್ಕಾರ.

**2023 ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಸೋಲಿಗೆ ಕಾರಣಗಳು**

ಈ ಭಾರಿ ಬಿಜೆಪಿ ಪಕ್ಷದ ಸೋಲಿಗೆ ಸರಣಿ ಕಾರಣಗಳನ್ನು ವಿಶ್ಲೇಷಣೆ ಮಾಡಲಾಗಿದೆ ಅವುಗಳೆಂದರೆ, ಪಠ್ಯಪುಸ್ತಕಗಳಲ್ಲಿ ನಾರಾಯಣ ಗುರುಗಳ ಪಾಠ ಕೈ ಬಿಟ್ಟಿದ್ದು, ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ನಾರಾಯಣ ಗುರುಗಳ ಸ್ಥಬ್ದಚಿತ್ರ ನಿರಾಕರಿಸಿದ್ದು, ಪಿಎಸ್‌ಐ ನೇಮಕಾತಿ ಹಗರಣ, ಸಹಾಯಕ ಪ್ರಾಧ್ಯಾಪಕ ನೇಮಕಾತಿ ಅಕ್ರಮ, ಜೆಇಇ ನೇಮಕಾತಿ ಹಗರಣ, ಕೆಪಿಟಿಸಿಎಲ್ ನೇಮಕಾತಿ ಹಗರಣ, 15ನೇ ಹಣಕಾಸು ಆಯೋಗದಲ್ಲಿ ಮೋಸ, ಜಿಎಸ್‌ಟಿ ಪಾಲು ನೀಡದೆ ರಾಜ್ಯದ ಮೇಲೆ ಸಾಲದ ಹೊರೆ, ಸರ್ಕಾರದ ಕೈಪಿಡಿಯಲ್ಲಿ ಅಂಬೇಡ್ಕರ್ ಸಂವಿಧಾನ ಬರೆದವರಲ್ಲ ಎಂದಿದ್ದು, ಪಠ್ಯದಲ್ಲಿ ಅಂಬೇಡ್ಕರ್ ಸಂವಿಧಾನ ಶಿಲ್ಪಿ ಅಲ್ಲ ಎಂದಿದ್ದು, ಕುವೆಂಪು ಅವರಿಗೆ ಪಠ್ಯದಲ್ಲಿ ಅವಮಾನಿಸಿದ್ದು, ಕುವೆಂಪು ವಿರೋಧಿಯನ್ನು ಪಠ್ಯ ಪುಸ್ತಕ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದ್ದು, ಕನ್ನಡ ಧ್ವಜ ಬೇಕಿಲ್ಲ ಎಂದಿದ್ದು, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ಕೊಡದೆ ಕನ್ನಡಕ್ಕೆ ಅವಮಾನಿಸಿದ್ದು, ಹಿಂದಿಯ ಗುಲಾಮಗಿರಿ ನಡೆಸಿದ್ದು, ಪಠ್ಯದಲ್ಲಿ ಬಸವಣ್ಣನ ಪಠ್ಯ ಕೈಬಿಟ್ಟಿದ್ದು, ಶರಣರ ವಚನ ಕೈಬಿಟ್ಟಿದ್ದು, ರಾಜ್ಯಕ್ಕೆ ಬರ ಬಂದಾಗ ದೇಶದ ಪ್ರಧಾನಿ ಬರಲಿಲ್ಲ ಆದರೆ ಚುನಾವನಾ ಪ್ರಚಾರಕ್ಕೆ ಬಂದಿದ್ದು, ದಿನನಿತ್ಯ ಬಳಕೆಯ ಆಹಾರ ಪದಾರ್ಥಗಳ ಬೆಲೆ ಏರಿಕೆ ಮಾಡಿದ್ದು, ಪೆಟ್ರೋಲ್ ಮತ್ತು ಡೀಸಲ್ ಧರ, ಅಡುಗೆ ಅನಿಲ ಧರ ಹೆಚ್ಚು ಮಾಡಿದ್ದು, ನಿರುದ್ಯೋಗ ಹೆಚ್ಚಳ, ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಖಾಸಗೀಕರಣ ಮಾಡಿದ್ದು, ಕೋಮುಗಲಭೆಗೆ ಸಂಬಂಧಿಸಿದ ಹಲವು ಪ್ರಕರಣಗಳು, ಒಳಮೀಸಲಾತಿಯ ಪೆಟ್ಟು, ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸದೆ ಇದ್ದಿದ್ದು ಮೊದಲಾದ ಸಮಸ್ಯೆಗಳು ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸೋಲಿಗೆ ಪ್ರಮುಖ ಕಾರಣಗಳು ಎಂಬುದು ಸಾರ್ವಜನಿಕ ವಲಯದ ಚರ್ಚೆಗಳಿಂದ ಗುರುತಿಸಲಾಗಿದೆ. ಈ ಎಲ್ಲಾ ಸೋಲಿನ ಕಾರಣಗಳನ್ನು ಅವಲೋಕನ ಮಾಡಿಕೊಳ್ಳಬೇಕಾದ ಕಾಲ ಬಿಜೆಪಿಗೆ ಬಂದಾಗಿದೆ. ಈ ವೈಫಲ್ಯತೆಗಳು ಮುಂದಿನ 17 ನೇ ಲೋಕಸಭೆಯ ಚುನಾವಣೆಯ ಮೇಲೂ ಪರಿಣಾಮ ಬೀರಬಹುದು.

**ಉಪಸಂಹಾರ**

ಕರ್ನಾಟಕ ಜನರಿಗೆ ಜಾಗೃತಿ ಬಂದಾಗಿದೆ, ರಾಜ್ಯದ ಜನರು ಪ್ರಜ್ಞಾವಂತರು, ವಿಚಾರವಂತರು ಎಂಬುದನ್ನು ತಮ್ಮ ಮತ ಆದೇಶದ ಮೂಲಕ ಸಾಬೀತುಪಡಿಸಿದ್ದಾರೆ. ಈ ಮತ ಆದೇಶ ಕಾಂಗ್ರೆಸ್ ಪಕ್ಷಕ್ಕೆ ಕೇವಲ ಸರ್ಕಾರ ರಚನೆ ಮಾಡುವ ಅವಕಾಶ ಕೊಟ್ಟಿರುವುದು ಮಾತ್ರವಲ್ಲದೆ ರಾಜ್ಯದ ಜನರು ದೊಡ್ಡ ಜವಾಬ್ದರಿಗಳ ಮೂಟೆಗಳನ್ನೇ ಹೊರಿಸಿದ್ದಾರೆ. ಜವಾಬ್ದಾರಿಗಳನ್ನು ಕಾರ್ಯಗತ ಮಾಡುವ ಹೊಣೆಗಾರಿಕೆ ಕಾಂಗ್ರೆಸ್ ಸರ್ಕಾರದ್ದಾಗಿದೆ, ಮೊದಲು ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಚಾಚು ತಪ್ಪದೆ ಅನುಷ್ಠಾನ ಮಾಡಿ ಮತದಾರರ ವಿಶ್ವಾಸವನ್ನು ಉಳಿಸಿಕೊಳ್ಳಬೇಕಾಗಿದೆ. ಬಿಜೆಪಿ ಸರ್ಕಾರ ಮಾಡಿದ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳುವ ಹೋಣೆಗಾರಿಕೆ ಕಾಂಗ್ರೇಸ್ ಸರ್ಕಾರದ್ದಾಗಿದೆ. ವಿಶೇಷವಾಗಿ ರಾಜ್ಯದಲ್ಲಿ ಯಾವುದೇ ವರ್ಗದ ಜನರ ಅತಿರೇಕಗಳನ್ನು ಪೋಷಿಸದೆ ಅವುಗಳನ್ನು ಹತ್ತಿಕ್ಕಿ ಶಾಂತಿ, ಸೌಹಾರ್ಧತತೆಯ ವಾತವರಣವನ್ನು ಕಾಪಾಡಿಕೊಂಡು ಹೋಗುವ ಗುರುತರವಾದ ಜವಾಬ್ದಾರಿಯನ್ನು ರಾಜ್ಯ ಜನರು ನೀಡಿದ್ದಾರೆ. ರಾಜ್ಯದ ಜನತೆಗೆ ಬೇಕಿರುವುದು ಯಾವುದೇ ಒಬ್ಬ ವ್ಯಕ್ತಿ ಅಲ್ಲ, ಒಂದು ಪಕ್ಷವಲ್ಲ ಬದಲಾಗಿ ರಾಜ್ಯದ ಸರ್ವತೋಮುಖ ಅಭಿವೃದ್ದಿ ಎಂಬುದನ್ನು ಗಮನದಲ್ಲಿ ಇರಿಸಿಕೊಂಡು ಪಾರದರ್ಶಕ ಆಡಳಿತದ ನಿರೀಕ್ಷೆ ಈಗ ರಾಜ್ಯದ ಜನತೆಯದ್ದು. ಈ ಚುನಾವಣೆಯ ಫಲಿತಾಂಶ ಈಡೀ ದೇಶಕ್ಕೆ ಒಂದು ದೊಡ್ಡ ಸಂದೇಶವಾಗುವುದರಲ್ಲಿ ಎರಡು ಮಾತಿಲ್ಲ.

**ಪರಾಮರ್ಶನ ಗ್ರಂಥಗಳು**


- ರಾಜಶೇಖರ ಹೆಚ್.ಎಂ. (2017). *ಭಾರತ ಸಂವಿಧಾನ ಮತ್ತು ಸರ್ಕಾರ.* ಕಿರಣ್ ಪ್ರಕಾಶನ.
- *Election Commission of India*. (2023). https://results.eci.gov.in/ResultAcGenMay2023/partywiseresult-S10.htm
- *Karnataka coalition government*. The Economic Times. https://economictimes.indiatimes.com/topic/karnataka-coalition-government
- *Karnataka State Election Commission*. https://karsec.gov.in/
- Karunakaran, K. P. (1975). Coalition governments in India : problems and prospects. In *Indian Institute of Advanced Study e-Books*. http://ci.nii.ac.jp/ncid/BA57491686
- Rajindra Singh Chauhan and Shailaja Vasudev. (2011). *Coalition Government in India; Problems and Prospects*. Deep and Deep Publications.